ಪುಡಿ ಹಾಕಿ ಮಾಡಿದ ಡೈರೆಕ್ಟ್ ಕಾಫಿ – ಒಂದಾ ಎರಡಾ... ಹಾಲು ಹೇರಳವಾಗಿದ್ದರೆ ಒಂದು ಕಾಫಿ, ಹಾಲು ಕಮ್ಮಿಯಿದ್ದಾಗ ನಮ್ಮ ಅನುಕೂಲದ ಕಾಫಿ. ಇನ್ನು ಮನೆಯೊಡತಿಯ ಮೂಡ್ ಮೇಲೆ ಅವಲಂಬಿತವಾಗಿ ತಯಾರಾಗುವ ಚೆಂದದ ಕಾಫಿ, ಚೆಂದವಲ್ಲದ ಕಾಫಿ ಹೀಗೆ ನೂರೆಂಟು ಬಗ್ಗೆಯ ಕಾಫಿಗಳಂಟು. ಇಷ್ಟೇ ಅಲ್ಲದೇ ಆಯಾಮನೆಯಲ್ಲಿ ಅವರು ಪರಂಪರಾಗತವಾಗಿ ಮಾಡಿಕೊಂಡು ಬಂದ ಕಾಫಿಯ ಬಗೆಗಳಂಟು. ಇನ್ನು ಕಾಫಿಯ ವೆರೈಟಿಗಳನ್ನು ಹೇಳುವುದಾದರೆ, ಹೋಟೇಲ್‌ಗಳಲ್ಲಿ ತುಂಬಿ ಚೆಲ್ಲುವಂತೆ ಕೊಡುವ ಗಾಜಿನ ಗ್ಲಾಸಿನ ಕಾಫಿ, ಇತ್ತೀಚೆಗೆ ಪರಿಚಯಿಸ್ಪಟ್ಟಿರುವ ಪೇಪರ್ ಲೋಟದ ಕಾಫಿ... ಹೀಗೆ ಪಟ್ಟಿ ಮಾಡುತ್ತಾ ಹೋದರೆ ಒಂದು ಗ್ಲಾಸು ಕಾಫಿ ಎಷ್ಟೆಲ್ಲಾ ಆಯಾಮಗಳನ್ನು ಪಡೆದು ರೂಪಾಂತರವಾಗಿದೆ ಎನ್ನುವುದು ಅಚ್ಚರಿಹುಟ್ಟಿಸುತ್ತದೆ.

ಇನ್ನು ಕಾಫಿ ಕುಡುಕರು (ಕಾಫಿ ಕಂಡರೆ ಓಡುವ ಮಂದಿ) ಕುರಿತು ಹೇಳಲೇಬೇಕು. ಸಾಧಾರಣವಾಗಿ ಬೆಂಗಳೂರು ಮತ್ತು ಮೈಸೂರು ಕಡೆಯ ಜನರು, ಕೊಡಗಿನ ಜನರು ನಿಮಿಷಕ್ಕೊಮ್ಮೆ ಕಾಫಿ ಗುಟುಕರಿಸುವುದು ಕಂಡು ನಾವೇನು ಕಳ್ಳು ಕುಡಿದೆವೆನೋ ಅನ್ನುವ ಹಾಗೇ ಮುಖಭಾವ ಮಾಡುವುದು ನೋಡಿರುತ್ತೇವೆ. ಇಲ್ಲದಿದ್ದರೂ ನಮ್ಮ ಮಲೆನಾಡ ಮಂದಿಗೆ ಕಾಫಿ ಕುಡಿಯುವುದು ಒಂದು ಚಟವೇ ಆಗಿರುತ್ತದೆ. ವಯಸ್ಸಾದವರು ಮನೆಯಲ್ಲಿ ಇದ್ದರೆ ನಿಮಿಷಕ್ಕೊಮ್ಮೆ 'ಒಂದು ಗ್ಲಾಸು ಕಾಫಿ ಸಿಗಬಹುದಾ?' ಎಂದು ಪದೇ ಪದೇ ಅಡುಗೆಮನೆ ಕಡೆ ದೃಷ್ಟಿ ಹಾಯಿಸುತ್ತಾರೆ. ಕಾಫಿ ಕೊಟ್ಟು ಸುಸ್ವಾದ ಮನೆಯಾಕೆಯ ಕೈಯಿಂದ ಆಗುವ ಸಹಸ್ರನಾಮಾರ್ಚನೆ ಇಲ್ಲಿ



ಸಾಮಾನ್ಯ. ಅದಕ್ಕಾಗೇ ಕಾಫಿಯನ್ನು ಹಿಡಿದಿಟ್ಟುಕೊಳ್ಳುವ ಫ್ಲಾಸ್ಕುಗಳು ಎಲ್ಲರ ಮನೆಯಲ್ಲೂ ಇರುತ್ತವೆ.

ಯಾರೇ ಮನೆಗೆ ಬಂದರೂ ಮೊದಲ ಸ್ವಾಗತಕಾರಿ ಪೇಯವೇ ಕಾಫಿ. ಕಾಫಿ ಕುಡಿಯುತ್ತಲೇ ಮನೆಯಾಕೆಯ ಕೈರುಚಿ ಪರಿಚಯವಾಗುತ್ತದೆ. 'ಅದೊಂದು ಕಾಫೀನಾ? ಕಾಫಿ ಮಾಡೋಕು ಬರಲ್ಲ, ಅವಳೂ ಒಬ್ಬಳು ಹೆಂಗಸಾ?' ಎಂದು ಹೆಣ್ತನವನ್ನೇ ಪ್ರಶ್ನೆ ಮಾಡುವ ಭೂಪರೂ ಇರುತ್ತಾರೆ. ಒಂದು ಕಾಫಿಗಾಗಿ ತಲೆಹೋಗುವ ಮಾದರಿ ಆಡುವ ಅಂಥವರನ್ನು ಹತ್ತಿರದಿಂದ ನೋಡಿಯೇ ತಿಳಿಯಬೇಕು. ಕಾಫಿ ಮಾಡಲು ಬಾರದ ಹುಡುಗಿಯರಿಗಂತೂ ಭೂಮಿ ಮೇಲೆ ಬದುಕಲು ಅರ್ಹರೇ ಅಲ್ಲ ಎನ್ನುವಂತೆ ವರ್ತಿಸುತ್ತಾರೆ.

ಕಾಫಿ ಅಂದರೆ ಮಾರು ದೂರ ಓಡುವವರೂ ಇದ್ದಾರೆ. ಅಂಥವರಿಗೆ ಕೊಡಗಿನಂಥ ಮಲೆನಾಡಿನಲ್ಲಿ ಇದ್ದರಂತೂ ಅನ್ಯಗ್ರಹ ಜೀವಿಗಳು ಅನುಭವಿಸುವಂಥ ಕಾಟವನ್ನು ಅನುಭವಿಸಬೇಕು. ಯಾರ ಜೊತೆಗೆ, ಯಾರದ್ದೇ ಮನೆಗೆ ಹೋದರೂ ಕೂಡ ಕಾಫಿ ಕಪ್ ಮುಂದೆ ಹಿಡಿಯುತ್ತಾರೆ. ಕಾಫಿ ಬೇಡ ಎಂದರೆ, ಯಾಕೆ ಎನ್ನುವ ಪ್ರಶ್ನೆ. ಟೀ, ಹಾಲು, ಹಾರ್ಲಿಕ್ಸ್ ಕುಡಿಯುತ್ತೀರಾ ಅಂಥ ಪರ್ಯಾಯ ಪೇಯಗಳ ಆಸೆ ಬೇರೆ ಒಡ್ಡುತ್ತಾರೆ. ಅಷ್ಟರಲ್ಲಿ ಅವರು ಏನು ಕುಡಿಯದವರಾಗಿದ್ದರೆ ನನಗೆ ಗ್ಯಾಸ್ ಸಮಸ್ಯೆ, ಹೊಟ್ಟೆಉರಿ, ಉಷ್ಣ ಅಂಥ ಅವರ ಪೂರ್ತಿ ಚರಿತ್ರೆ ಇವರ ಮುಂದೆ ಹೇಳಿ ಅವರನ್ನು ಒಪ್ಪಿಸಬೇಕಾದ ಅನಿವಾರ್ಯತೆ. ಇಷ್ಟೆಲ್ಲ ಕಾಟ ಎದುರಿಸುವ ಬದಲು ಒಂದು ಗುಟುಕು ಕಾಫಿ ಕುಡಿದು ಬಿಟ್ಟರೆ ಸಮಸ್ಯೆ ಅಲ್ಲಿಗೆ ಕೊನೆಯಾಗುತ್ತದೆ.

ಇನ್ನು ಕಾಫಿ ಕುಡಿಯುವ ಸಮಯ – ಕೆಲವರಿಗೆ ಕಣ್ ಬಿಟ್ಟ ತಕ್ಷಣ ಮೊದಲು ಕಾಫಿ ಕುಡಿಯಬೇಕು. ಇನ್ನು ಕೆಲವರಿಗೆ ಬ್ರಶ್ ಮಾಡಿದ ಕೂಡಲೇ ಕಾಫಿ ಇರಬೇಕು. ಇನ್ನು ಕೆಲವರಿಗೆ ಎದ್ದಲ್ಲಿಂದ ರಾತ್ರಿ ಅಡುಗೆಮನೆ ದೀಪ ಆರುವವರೆಗೂ ಕಾಫಿಸೇವನೆ ಆಗಾಗ ಮಾಡಬೇಕು. ಕೆಲವರಿಗೆ ವಿಪರೀತ ಚಳಿಯಿದ್ದಾಗ ಮತ್ತು ಕೆಲವರಿಗೆ ತಲೆನೋವಾದಾಗ, ಇನ್ನು ಕೆಲವರಿಗೆ ಬೇಸರವಾದಗ, ಸಂತೋಷವಾದಾಗ... ಎಲ್ಲಾ ಸಮಯವೂ ಕಾಫಿಗೆ ಪ್ರಶಸ್ತ.

ಕಾಫಿ ಕೆಲವರಿಗೆ ಚಟವಾದರೆ, ಕೆಲವರಿಗೆ ಅಗತ್ಯ. ಇನ್ನು ಒಂದಷ್ಟು ಜನರಿಗೆ ಕಾಫಿ ಬೇಕಂತಲೇ ಇಲ್ಲ. ಆದರೆ, ಕಾಫಿ ಕುಡಿಯುವವರು ಮೈಸೂರಿಗರ ಮನೆಗಳಿಗೆ ಹೋದರೆ ಅವರ ಸ್ಥಿತಿ ಬಾಲ ಸುಟ್ಟ ಬೆಕ್ಕಿನಂತಾಗಿ ಬಿಡುತ್ತದೆ. ಮೈಸೂರು ಕಡೆ ಹಲವು ಮನೆಗಳಲ್ಲಿ ಕಾಫಿಯನ್ನು ಒಂದು ಪೇಯ ಎಂದು ಗುರುತಿಸುವುದೇ ಕಡಿಮೆ. ಇನ್ನು ನಮ್ಮ ಕೊಡಗಿನವರಿಗೆ ಆರು ಗಂಟೆಗೆ ಕಾಫಿ ಕುಡಿದು ಆಗಬೇಕು. ಅವರು ಬೆಳಗ್ಗೆ ಹತ್ತಾದರೂ ಕೊಡಲ್ಲ, ಇವರು ಅಡುಗೆಮನೆ ಕಡೆ ನೋಡುವುದು ಬಿಡಲ್ಲ ಅನ್ನುವ ಹಾಗಾಗುತ್ತದೆ. ಆದರೆ, ಮೈಸೂರಿಗರಲ್ಲೂ ಕಾಫಿ ಪ್ರೇಮಿಗಳಿದ್ದಾರೆ. ನಮ್ಮ ಮಲೆನಾಡಿನವರಷ್ಟು ಕಾಫಿಯ ಗೀಳು ಆ ಮಂದಿಗೆ ಇರುವುದಿಲ್ಲ. ಇನ್ನು ಕೆಲವರಿಗೆ ಸಂಜೆ 4ಕ್ಕೆ ಕಾಫಿ ಕುಡಿಯಬೇಕು. ಕುಡಿಯದಿದ್ದರೆ ಏನೋ ಅಪೂರ್ಣ ಭಾವ.

ಇನ್ನು ಕಾಫಿ ಮನಸ್ಸಿನಲ್ಲಿ ಅಳಿಯಲಾರದ ಕಲೆಗಳನ್ನು ಉಳಿಸಿ ಹಾಕಿರುವ ಹಾಗೆ. ನಾವು ಕುಡಿಯುವ ಕಾಫಿ ನಮ್ಮ ಮನೆಯ ಸಾಕಷ್ಟು ವಸ್ತುಗಳ ಮೇಲೆ ಕಲೆಗಳನ್ನು ಹಾಕಿರುತ್ತದೆ. ಅಂಥದ್ದರಲ್ಲಿ ಕೆಲವರು ದುಬಾರಿ ಬೆಡ್‌ಶೀಟ್ ಮೇಲೆ ಕಾಫಿ ಬೀಳಿಸುವುದು, ಟೀಪಾಯಿ ಮೇಲೆ ಕಾಫಿ ಬೀಳಿಸುವುದು, ತಮ್ಮ ಅಂಗಿಯ ಮೇಲೆ ಕಾಫಿ ಬೀಳಿಸಿಕೊಳ್ಳುವುದು. ಹೀಗೆ ಎಷ್ಟೋ ಮನೆಗಳಲ್ಲಿ ಮೈಮೇಲೆ, ಬಟ್ಟೆಯ ಮೇಲೆ ಅಂಟಿದ ಕಲೆಗಳು ನಿಮ್ಮನ್ನು ಬಿಟ್ಟು ಎಲ್ಲೂ ಹೋಗಲ್ಲ ಅಂಥ ಗಟ್ಟಿಯಾಗೀ ಕೂತೇ ಇರುತ್ತವೆ. ಕೆಲವರಿಗೆ ಹಬೆಯಾಡುವ ಬಿಸಿ ಕಾಫಿ ಗಂಟಲು ತಾಕಬೇಕು, ಇನ್ನು ಹಲವರಿಗೆ ಸಾಧಾರಣ ಬಿಸಿಯಿರಬೇಕು. ಹೆಂಡತಿ ಅಥವಾ ಅಮ್ಮನಾದವಳು ಆ ಮನೆಯವರಿಗೆ ಯಾರಿಗೆ ಯಾವ ರೀತಿಯ ಕಾಫಿ ಎನ್ನುವ ಸೂಕ್ಷ್ಮ ಅರಿತಿರಬೇಕು. ಹಾಗಾಗಿ ಪ್ರತಿಮನೆಯಲ್ಲೂ ಒಂದೇ ಟ್ರೇಯಲ್ಲಿ ನಾಲ್ಕು ಕಪ್ ಕಾಫಿ ತಂದರೂ ಮೊದಲನೆಯದು ಮಾವನಿಗೆ ಶುಗರ್ ಲೆಸ್, ಮಧ್ಯದ್ದು ಅತ್ತೆಗೆ ಸಕ್ಕರೆ ಸಾಧಾರಣ, ಇಬ್ಬರು ಮಕ್ಕಳಿಗೆ ಸಕ್ಕರೆ ಜಾಸ್ತಿ, ಡಿಕಾಕ್ಷನ್ ಕಮ್ಮಿ – ಹೀಗೆ ಒಂದೇ ಬಾರಿಗೆ ನಾಲ್ಕು ಬಗೆ ರುಚಿಯಿರುವ ಕಾಫಿ ಮಾಡಿ ತಂದಿರುತ್ತಾರೆ. ಮನೆಯೊಡತಿ ಈ ಸವಾಲಿನಲ್ಲಿ ಗೆದ್ದರೆ ಅವಳು ಜೀವನವನ್ನು ಗೆದ್ದಂತೆ.

ಇತ್ತೀಚೆಗೆ ಜಗತ್ತು ತನ್ನ ಬಟ್ಟೆ, ಸ್ವರೂಪ ಎಲ್ಲವನ್ನು ಬದಲಾಯಿಸಿಕೊಂಡಿದೆ. ಹಾದಿಬೀದಿಯ ಮಕ್ಕಳೆಲ್ಲಾ ಕಾಫಿ ಡೇ, ಸ್ಟಾರ್ಬಕ್ಸ್, ಕೆಫೆ ಕಾಫಿಡೇ ಅನ್ನಲಾರಂಭಿಸಿದ್ದಾರೆ. ಕಾಫಿ ಇಂದು ಅಂತರರಾಷ್ಟ್ರೀಯ ಕಂಪನಿಗಳ ನಿಗಿನಿಗಿ ಸರಕಾಗಿದೆ. ಗ್ರಾಂಗಳಲ್ಲಿ ಅಳೆದು ತೂಗಿ ಕಾಫಿ ಮಾಡಿ, ಅದಕ್ಕೆ ಸರ್ಫ್ ನೊರೆಯಂತೆ ನೊರೆ ಭರಿಸಿ, ಒಂದಿಷ್ಟು ಅಲಂಕಾರ ಮಾಡಿ ಮಗ್‌ಗಳಲ್ಲಿ ಮುಖ ತೊಳೆದುಕೊಳ್ಳುವಷ್ಟು ಕಾಫಿ ಕೊಟ್ಟು, ಕಾಫಿ ಜೊತೆಗೆ ಇದ್ದ ಒಂದು ಸುಂದರ ಪ್ರಪಂಚವನ್ನು ನಮ್ಮ ಹೊಸತಲೆಮಾರಿಗೆ ಇಲ್ಲವಾಗಿಸುತ್ತಿದ್ದಾರೆ.

ಕಾಫಿ ಕುಡಿದರೋ ಬಿಟ್ಟರೋ ಮುಖವನ್ನು ವಕ್ರವಕ್ರವಾಗಿ ಮಾಡಿಕೊಂಡು ಸೆಲ್ಫಿ ತೆಗೆದುಕೊಂಡು ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡುತ್ತಿದ್ದಾರೆ. ಡೇಟಿಂಗ್ ಹಾಗೂ ಮದುವೆ ಸಂಬಂಧ ಪಕ್ಕಾ ಮಾಡುವ ಸೆಂಟರ್‌ಗಳು ಈ ಕಾಫಿಡೇಗಳಾಗುತ್ತಿವೆ. ಮನೆಮಂದಿಯ ಜೊತೆ ಹರಟುತ್ತಾ ಕಾಫಿ ಕುಡಿಯುವ ಸುಖವನ್ನು ನಗರದ ಮಂದಿ ನಿಧಾನಕ್ಕೆ ಕಳೆದುಕೊಳ್ಳುತ್ತಿದ್ದಾರೆ.

ಅಮ್ಮ ಪ್ರೀತಿ ಬೆರೆಸಿ ಕೊಡುತ್ತಿದ್ದ ಒಂದು ಚಿಕ್ಕ ಖುಷಿಯನ್ನು ಕಿತ್ತು ಕಾಫಿಡೇಗಳಿಗೆ ಅಡವಿಟ್ಟಾಗಿದೆ. ಆದರೆ, ಕಾಫಿಯ ತಲೆಮಾರು, ಕಾಫಿ ಬಗೆಗಿನ ಒಂದು ಸುಂದರ ಅನುಭೂತಿ ನಮ್ಮ ಮಲೆನಾಡ ಜನರಲ್ಲಿ ಇನ್ನೂ ಉಳಿದಿದೆ. ಆ ಚಿಕ್ಕ ಸಂಪತ್ತು–ಸಂತಸವನ್ನು ಹಾಗೇ ಕಾಪಾಡೋಣ. ●